**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21** **ದಿನಾಂಕ : 27–10–2020**

# ಪತ್ರಿಕಾ ಪ್ರಕಟಣೆ

## ಶೋಕ ಸಂದೇಶ

**ಬೆಂಗಳೂರು, ಅಕ್ಟೋಬರ್ 27 (ಕರ್ನಾಟಕ ವಾರ್ತೆ):**

ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕು ಮತಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿದ್ದ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಮಾಜಿ ಸಚಿವರಾಗಿದ್ದ ಡಾ: ವೈ ನಾಗಪ್ಪ ಅವರ ನಿಧನದಿಂದ ಮನಸ್ಸಿಗೆ ನೋವುಂಟಾಗಿದೆ. ಶ್ರೀಯುತರ ಆಗಲಿಕೆಯಿಂದ ನಮ್ಮ ನಾಡಿನ ಹಿರಿಯ ಮುಖಂಡರೊಬ್ಬರನ್ನು ಕಳೆದುಕೊಂಡಂತಾಗಿದೆ. ಮೃತರ ಆತ್ಮಕ್ಕೆ ಶಾಂತಿ / ಸದ್ಗತಿ ಯನ್ನು ಹಾಗೂ ಅವರ ಕುಟುಬಂದ ಎಲ್ಲಾ ಸದಸ್ಯರಿಗೆ ಮೃತರ ಅಗಲಿಕೆಯ ದುಃಖವ ’ನ್ನು ಭರಿಸುವ ಶಕ್ತಿ ನೀಡಲೆಂದು, ವಿಶ್ವೇಶ್ವರ ಹೆಗಡೆ ಕಾಗೇರಿ, ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ ಇವರು ಭಗವಂತನ ’ಲ್ಲಿ ಪ್ರಾರ್ಥಿಸಿರುವುದಾಗಿ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

## ಸಚಿವರ ಪ್ರವಾಸ

**ಬೆಂಗಳೂರು, ಅಕ್ಟೋಬರ್ 27 (ಕರ್ನಾಟಕ ವಾರ್ತೆ):**

ಮಾನ್ಯ ವಸತಿ ಸಚಿವರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಅವರು ದಿನಾಂಕ: 28 –10–2020ರಂದು ಗುಮಕೂರು ಜಿಲ್ಲೆಯ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ವಾಪಸ್ಸಾಗಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಪ್ರಾಣಿಗಳ ದತ್ತು ಸ್ವೀಕಾರ

**ಬೆಂಗಳೂರು, ಅಕ್ಟೋಬರ್ 27 (ಕರ್ನಾಟಕ ವಾರ್ತೆ):**

ಮೈಸೂರು ಮೃಗಾಲಯದ "ಪ್ರಾಣಿಗಳ ದತ್ತು ಸ್ವೀಕಾರ " ಯೋಜನೆ ಅಡಿಯಲ್ಲಿ 1) ಹೆಚ್. ಆರ್. ವೆಂಕಟೇಶ್, ಬೆಂಗಳೂರು ಇವರು ಬ್ಲಾಕ್ ಬಕ್, ಸ್ಮೂತ್ ಕೋಟೆಡ್ ಆಟ್ಟರ್ ಮತ್ತು ಇಂಡಿಯನ್ ಕ್ರೆಸ್ಟಡ್ ಪೋರ್ಕುಪ್ಲೆನ್ 2) ಧ್ರುವ್ ಕರ್‍ಯೆ, ಬೆಂಗಳೂರು ಇವರು ಫರಿಯಾಲ್ ಹಾಗೂ 3) ಸ್ನೇಹಸಿಂಚನ ಟ್ರಸ್ಟ್, ಬೆಂಗಳೂರು ಇವರು ಫ್ಲೆಮುಂಗೋ, ಬಿಳಿ ನವಿಲು, ಫಿಂಚ್ ಮತ್ತು ಅಲೆಕ್ಸಾಂಡ್ರಿನ್ ಪ್ಯಾರಕೀಟ್ ಪ್ರಾಣಿ / ಪಕ್ಷಿಗಳನ್ನು ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸಿ ದತ್ತು ಸ್ವೀಕಾರ ಮಾಡಿರುವರಂದು ಶ್ರೀ ಚಾಮರಾಜರೇಂದ್ರ ಮೃಗಾಲಯ, ಮೈಸೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

**ಬೆಂಗಳೂರು, ಅಕ್ಟೋಬರ್ 27 (ಕರ್ನಾಟಕ ವಾರ್ತೆ):**

ಬೆಂಗಳೂರಿನ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ರಾಜ್ಯ ಎನ್.ಎಸ್.ಎಸ್. ಯುವಜನ ಸಬಲೀಕರಣ ಇಲಾಖೆಯ ಸಹಯೋಗದಲ್ಲಿ ಬೇವೂರಿನ ಶ್ರೀ ಸಿದ್ಧರಾಮೇಶ್ವರ ವಿದ್ಯಾ ಸಂಸ್ಥೆಯು ಆವರಣದಲ್ಲಿ ವಿವಿಧ ದತ್ತಿ ಕಾರ್ಯಕ್ರಮಗಳ ಅಡಿಯಲ್ಲಿ ದಿನಾಂಕ 31.10.2020ರ ಶನಿವಾರ ಬೆಳಗ್ಗೆ 10.30ಕ್ಕೆ ಸಸಿ ನೆಡುವಿಕೆ ಹಾಗೂ ವಿತರಣೆ, ಎಸ್.ಎಸ್.ಎಲ್.ಸಿ ಮತ್ತು ಪಿ.ಯು ಕಾಲೇಜು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಗೌರವ ಸನ್ಮಾನ ಸಮಾರಂಭ ಏರ್ಪಡಿಸಲಾಗಿದೆ.

ಸಮಾರಂಭವನ್ನು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾದ ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ರವರು ಉದ್ಘಾಟಿಸಲಿದ್ದಾರೆ. ಗಾಂಧೀಭವನದ ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾಕೃಷ್ಣಪ್ಪನವರು ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಗೌರವಿಸಲಿ ದ್ದಾರೆ. ಸಿದ್ದರಾಮೇಶ್ವರ ವಿದ್ಯಾಸಂಸ್ಥೆ ಯ ಅಧ್ಯಕ್ಷರಾದ ಕಾಳೇಗೌಡರು ಕಾರ್ಯದರ್ಶಿಗಳಾದ ಬಿ.ಎನ್. ಕಾಡಯ್ಯ , ಎನ್.ಎಸ್.ಎಸ್ ನ ಡಾ. ಪೂರ್ಣಿಮಾಜೋಗಿ ಪ್ರಾಂಶುಪಾಲರಾದ ಪ್ರೊ. ಡಿ.ಸಿ. ಸುರೇಶ್ ಮುಖ್ಯೋಪಾಧ್ಯಾಯರಾದ ಟಿ.ಆರ್. ರಂಗಸ್ವಾಮಿ, ಬುದ್ಧ, ಬಸವ, ಗಾಂಧಿ ಸ ಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಸಿಸಿರಾ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆಂದು ಗಾಂಧೀ ಭವನದ ಪ್ರಕಟಣೆ ತಿಳಿಸಿದೆ.

# ಶಿಕ್ಷಕರ ಕ್ಷೇತ್ರದ ಮತದಾನ ಮಾಡಲು ಅವಕಾಶ

**ಬೆಂಗಳೂರು, ಅಕ್ಟೋಬರ್ 27 (ಕರ್ನಾಟಕ ವಾರ್ತೆ):**

ಭಾರತ ಚುನಾವಣಾಯೋಗದ ಪತ್ರಿಕಾ ಪ್ರಕಟಣೆ ಸಂ. ಇಸಿಐ.ಪಿಎನ್/67/2020 ದಿನಾಂಕ: 29-09-2020ರನ್ವಯ ಬೆಂಗಳೂರು ಶಿ ಕ್ಷಕರ ಕ್ಷೇತ್ರ ಮತ್ತು ಕರ್ನಾಟಕ ಆಗ್ನೆಯ ಪದವೀಧರರ ಕ್ಷೇತ್ರದಿಂದ ಕರ್ನಾಟಕ ವಿ ಧನ ಪರಿಷತ್ತಿಗೆ ನಡೆಯಲಿರುವ ದ್ವೈವಾರ್ಷಿಕ ಚುನಾವಣೆ – 2020ಕ್ಕೆ ಸಂಬಂಧಿ ಸಿದಂತೆ ದಿನಾಂಕ: 28 -10-2020ರಂದು ನಡೆಯುವ ಮತದಾನದಲ್ಲಿ ಆಯಾ ಮತಕ್ಷೇತ್ರದ ವ್ಯಾಪ್ತಿಯಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಶಾಲಾ ಕಾಲೇಜುಗಳು, ಅನುದಾನಿತ ಹಾಗೂ ಅನುದಾನರಹಿತ ವಿದ್ಯಾ ಸಂಸ್ಥೆಗಳು ಸೇರಿದಂತೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು, ರಾಜ್ಯ ಹಾಗೂ ಕೇಂದ್ರ ಸರ್ಕಾರದ ಕಾರ್ಖಾನೆಗಳು, ಉಳಿದ ಕೈಗಾರಿಕಾ ಸಂಸ್ಥೆಗಳು ಹಾಗೂ ಸಹಕಾರಿ ರಂಗದ ಸಂಘ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಪದವೀಧರರು ಹಾಗೂ ಶಿಕ್ಷಕರು ಮತದಾನ ಮಾಡಲು ಅನುಕೂಲವಾಗುವಂತೆ ಅಂತಹ ಅರ್ಹ ಮತದಾರರಿಗೆ ಸೀಮಿತವಾದಂತೆ ಹಾಗೂ ಎಲ್ಲಾ ವ್ಯವಹಾರಿಕ ಸಂಸ್ಥೆಗಳು, ಔದ್ಯಮಿಕ ಸಂಸ್ಥೆಗಳು ಮತ್ತು ಇನ್ನಿತರ Establishment ಗಳಲ್ಲಿ ಖಾಯಂ ಆಗಿ ಅಥವಾ ದಿನಗೂ ಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಅರ್ಹ ಮತದಾರರಿಗೆ ಸೀಮಿತವಾದಂತೆ ಮತದಾನ ಮಾಡಲು ಅನುಕೂಲವಾಗುವಂತೆ ಅಂತಹ ಸರ್ಕಾರಿ / ಸರ್ಕಾರಿಯೇತರ ಸಂಸ್ಥೆಗಳ ಮುಖ್ಯಸ್ಥರು ಮತದಾರರಿಗೆ ಅವಕಾಶ ಕಲ್ಪಿಸುವಂತೆ ಚುನಾವಣಾಧಿಕಾರಿ, ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರ ಹಾಗೂ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.